ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp. 64-69
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ರಾಷ್ಟ್ರಕೂಟರ ಕಾಲದಲ್ಲಿ ಸ್ತ್ರೀ ದೇವತೆಗಳ ಸ್ಥಿತ್ಯಂತರ: ಒಂದು ವಿಮರ್ಶಾತ್ಮಕ ನೋಟ

**ನಾಗರಾಜ ಉಪ್ಪಾರ**
ಉಪನ್ಯಾಸಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ

***Abstract:***

*ಕರ್ನಾಟಕದ ಧಾರ್ಮಿಕ ಇತಿಹಾಸದಲ್ಲಿ ಸ್ಥಾಪಿತ ಧರ್ಮಗಳಾದ ಶೈವ, ವೈಷ್ಣವ, ಬೌದ್ಧ, ಜೈನ, ಧರ್ಮಗಳ ಬಗ್ಗೆ ಇಡಿಯಾಗಿ ಮತ್ತು ಬಿಡಿಯಾಗಿ ಬಹುತೇಕ ಅಧ್ಯಯನಗಳು ನಡೆದಿವೆ. ಆದರೆ ಸ್ಥಳೀಯ ಬುಡಕಟ್ಟು ಮತ್ತು ಗ್ರಾಮದೇವತೆಗಳ ಬಗ್ಗೆ ನಡೆದಿರುವ ಅಧ್ಯಯನಗಳು ಬಹಳ ವಿರಳವಾಗಿವೆ. ವೈದಿಕೇತರ ಧಾರ್ಮಿಕ ನಂಬಿಕೆಗಳು ಇತಿಹಾಸ ಬರೆವಣಿಗೆಯಲ್ಲಿ ನಿರ್ಲಕ್ಷ್ಯಕ್ಕೆ ಒಳಪಟ್ಟಿದ್ದು ಕೇವಲ ಎರಡು ಮೂರು ಸಾಲಿನ ಮಾಹಿತಿಯಷ್ಟೆ ದೊರೆಯುತ್ತದೆ. ಪ್ರಸ್ತುತ ಲೇಖನದಲ್ಲಿ ರಾಷ್ಟ್ರಕೂಟರ ಕಾಲದಲ್ಲಿ ಪ್ರಚಲಿತದಲ್ಲಿದ್ದ ಮತ್ತು ಮುನ್ನೆಲೆಗೆ ಬಂದ ಸ್ತ್ರೀ ದೇವತೆಗಳನ್ನು ಚಾರಿತ್ರಿಕ ದೃಷ್ಟಿಕೋನದಲ್ಲಿ ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಲೇಖನಕ್ಕೆ ಶಾಸನಗಳು, ಗ್ರಂಥಗಳು ಸೇರಿದಂತೆ ಪ್ರಾಥಮಿಕ ಮತ್ತು ಅನುಷಂಗಿಕ ಆಕರಗಳನ್ನು ಬಳಸಿಕೊಳ್ಳಲಾಗಿದೆ.*

***Keywords:*** *ಗಂಗರು, ಕದಂಬರು, ರಾಷ್ಟ್ರಕೂಟರು, ಶಾತವಾಹನರು, ಸ್ತ್ರೀ ದೇವತೆ, ಶಕ್ತಿ ದೇವತೆ, ಪ್ರಭುತ್ವ*

## ಪೀಠಿಕೆ

ಕರ್ನಾಟಕದ ಧಾರ್ಮಿಕ ಪ್ರಭುತ್ವದಲ್ಲಿ ಕೆಳವರ್ಗಗಳು ನಿರ್ಲಕ್ಷಕ್ಕೆ ಒಳಪಟ್ಟಂತೆ ಅವರ ನಂಬಿಕೆ, ಸಂಪ್ರದಾಯ, ಆಚರಣೆಗಳನ್ನು ಸಹ ಅಧ್ಯಯನಕ್ಕೆ ಯೋಗ್ಯವಲ್ಲವೆಂದು ಪ್ರಾರಂಭದ ಚರಿತ್ರೆಕಾರರು ನಿರ್ಲಕ್ಷ್ಯ ಮಾಡಿದ್ದಾರೆ. ಥೀಯೋಡರ್ ಎಲ್ಮೋರ್ ಅವರ ಪ್ರಕಾರ ಇದುವರೆಗಿನ ಹಿಂಧೂದರ್ಮದ ಅಧ್ಯಯನದಲ್ಲಿ ಶೇ.80 ಅಧ್ಯಯನಗಳು ಸ್ಥಳಿಯ ನೆಲೆದ ದೇವತೆಗಳನ್ನು ಕಡೆಗಣಿಸಿವೆ. ಇವುಗಳ ಚರ್ಚೆ ಒಂದು ಅಥವಾ ಎರಡು ಪುಟಗಳಿದ್ದರೆ ಅದೇ ಹೆಚ್ಚು. ಆದರೆ ವೈದಿಕ ದೇವತೆಗಳ ಚರ್ಚೆಗೆ ವಿಶೇಷ ಗಮನ ಕೊಡಲಾಗಿದೆ[1]

ಪ್ರಾಚೀನ ಕರ್ನಾಟಕದಲ್ಲಿ ಪ್ರಚಲಿತದಲ್ಲಿದ್ದ ಪ್ರಮುಖ ಸ್ತ್ರೀ ದೇವತೆಗಳ ಆರಾಧನೆಯಲ್ಲಿ ಬದಲಾಣೆಗಳಾಗಿರುವುದನ್ನು ಕೆಳಗಿನ ಕೋಷ್ಟಕದಿಂದ ತಿಳಿದುಕೊಳ್ಳಬಹುದಾಗಿದೆ. ರಾಷ್ಟ್ರಕೂಟರ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ದೇವತೆಗಳ ಜೊತೆಗೆ ಹೊಸ ದೇವತೆಗಳ ಆರಾಧನೆ ಕೂಡ ಪ್ರಾರಂಭವಾಗುತ್ತದೆ. ಕರ್ನಾಟಕದಲ್ಲಿ ಮಾತೃದೇವತಾರಾಧನಾ ಪದ್ಧತಿ ರೂಢಿಯಲ್ಲಿತ್ತು ಎಂಬುದನ್ನು ಇತಿಹಾಸದ ನೆಲೆಗಳಲ್ಲಿ ಕಾಣಬಹುದು. ಮೌರ್ಯರು ಹಾಗೂ ಶಾತವಾಹನರ ಕಾಲದಲ್ಲಿಯೇ ಕರ್ನಾಟಕದಲ್ಲಿ ಗಜಲಕ್ಷ್ಮಿಯ ಆರಾಧನೆ ರೂಢಿಯಲ್ಲಿತ್ತು ಎಂಬುದಕ್ಕೆ ಪ್ರಾಚೀನ ಉದಾಹರಣೆ ಕಲಬುರಗಿ ಜಿಲ್ಲೆಯ ಸನ್ನತಿ ಪರಿಸರದ ಹರಸಗುಂಡಿಯಲ್ಲಿ ದೊರೆತಿದೆ. ಯಕ್ಷನ ಶಿಲ್ಪದ ಕೊರಳ ಕಂಠದ ಸರದಲ್ಲಿ ಕಂಡರಿಸಿರುವ ಗಜಲಕ್ಷ್ಮಿಯ ಕೆತ್ತನೆ ವಿಶೇಷ ಗಮನ ಸೆಳೆಯುತ್ತದೆ.[2]

***Please cite this article as:*** ನಾಗರಾಜ ಉಪ್ಪಾರ. (2024). ರಾಷ್ಟ್ರಕೂಟರ ಕಾಲದಲ್ಲಿ ಸ್ತ್ರೀ ದೇವತೆಗಳ ಸ್ಥಿತ್ಯಂತರ: ಒಂದು ವಿಮರ್ಶಾತ್ಮಕ ನೋಟ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(4), 64–69

**ಪ್ರಾಚೀನ ಕರ್ನಾಟಕದಲ್ಲಿ ಪ್ರಚಲಿತದಲ್ಲಿದ್ದ ಪ್ರಮುಖ ಸ್ತ್ರೀ ದೇವತೆಗಳು**

| | |
|---|---|
| **ಗಂಗ–ಕದಂಬ** | ಮಹಿಷಾಸುರಮರ್ದಿನಿ, ಸಪ್ತಮಾತೃಕೆ, ಲಜ್ಜಾಗೌರಿ, ಲಕ್ಷ್ಮೀ |
| **ಬಾದಾಮಿ ಚಾಲುಕ್ಯ** | ಮಹಿಷಾಸುರಮರ್ದಿನಿ, ಸಪ್ತಮಾತೃಕೆ, ಲಜ್ಜಾಗೌರಿ, ಲಕ್ಷ್ಮಿ, ಬನಶಂಕರಿ |
| **ರಾಷ್ಟ್ರಕೂಟ** | ಭಗವತಿ, ದುರ್ಗಾ, ಲೋಕಮಹಾದೇವಿ, ಮಾಣಿಕಬ್ಬೆ, ಉರಿಯಮ್ಮ, ಕಾಳಿದೇವಿ, ಬಳರಿ, ಸರಸ್ವತಿ, ದೇಕಮ್ಮ, ಪಾರ್ವತಿ, ಲೋಕೇಶ್ವರಿ, ಬಾದುಬ್ಬೆ, ಎಲ್ಲಮ್ಮ, ಮಹಾಲಕ್ಷ್ಮಿ |

ಮಹಿಷಾಸುರಮರ್ಧಿನಿ ಮತ್ತು ಚಾಮುಂಡಿ ದೇವಿಯರ ಮೂಲನೆಲೆ ಕರ್ನಾಟಕವಾಗಿದ್ದು ಕರ್ನಾಟಕದ ಸೆವುಣರು ಬಂಗಾಳದ ಸೇನರಾಗಿ ರಾಜ್ಯಾಧಿಕಾರ ನಡೆಸಿ ಅಲ್ಲಿ ಕಾಳಿಯನ್ನು ಜನಪ್ರಿಯಗೊಳಿಸಿದರು. ಗಂಗರು ಹಾಗೂ ಕದಂಬರಿಂದ ಕರ್ನಾಟಕದ ಸ್ಥಳಿಯ ಸಂಸ್ಕೃತಿಗಳಿಗೆ ಮನ್ನಣೆ ದೊರೆಯಲು ಶುರುವಾಯಿತು.

ಗಂಗರು ಮತ್ತು ಕದಂಬರ ಕಾಲದಲ್ಲಿ ಶಾಕ್ತಮತದಲ್ಲಿದ್ದ ಮಹಿಷಾಸುರಮರ್ಧಿನಿ, ಬನಶಂಕರಿ, ಸಪ್ತಮಾತೃಕೆಯರು, ಲಜ್ಜಾಗೌರಿ, ಸರಸ್ವತಿ, ಲಕ್ಷ್ಮಿ ಮೊದಲಾದ ದೇವತೆಗಳ ಆರಾಧನೆ ಪ್ರಬಲವಾಗಿತ್ತು. ಆದರೆ ಸ್ಥಳಿಯ ಅನ್ನುವ ಯಾವ ದೇವತೆಗಳ ಪಟ್ಟಿಯು ಇದರಲ್ಲಿ ಕಂಡುಬರುವುದಿಲ್ಲ. ಸಾಮಾನ್ಯವಾಗಿ ಚರಿತ್ರೆಕಾರರು ಧಾರ್ಮಿಕ ವ್ಯವಸ್ಥೆಯನ್ನು ಚರ್ಚಿಸುವಾಗ ಶಾಕ್ತಮತ ಎಂದು ಹೇಳಿ ಅದರಲ್ಲಿ ಮುಖ್ಯವಾಗಿ ವೈದಿಕ ದೇವತೆಗಳ ಬಗ್ಗೆ ಚರ್ಚಿಸುತ್ತಾರೆ. ಬಾದಾಮಿ ಚಾಲುಕ್ಯರ ಅವಧಿಯಲ್ಲಿ ಮಹಿಷಾಸುರ ಮರ್ಧಿನಿ, ಬನಶಂಕರಿ, ಸಪ್ತಮಾತೃಕೆಯರು, ಲಜ್ಜಾಗೌರಿ ಆರಾಧಿಸುತ್ತಿದ್ದರು.

ವೈದಿಕ ಸಾಹಿತ್ಯದಲ್ಲಿ ಮೊದಮೊದಲು ಪುರುಷ ದೈವಗಳೇ ಪ್ರಧಾನವಾಗಿದ್ದವು ತದನಂತರ ಸ್ತ್ರೀ ದೈವಗಳು ಮುನ್ನೆಲೆಗೆ ಬಂದವು. ಪ್ರಾಚೀನ ಕರ್ನಾಟಕದಲ್ಲಿ ರಾಜರು ಮಹಿಷಾಸುರ ಮರ್ಧಿನಿ, ದುರ್ಗಾ, ಸಪ್ತಮಾತೃಕೆಯ ಆರಾಧನೆಯನ್ನು ಮಾಡುತ್ತಿದ್ದ ಕಾರಣ ಈ ದೇವತೆಗಳ ಅನುಗ್ರಹವು ಯುದ್ದದಲ್ಲಿ ಗೆಲವು ತಂದುಕೊಡುತ್ತಿದ್ದವು ಎನ್ನುವ ಬಲವಾದ ನಂಬಿಕೆಯಿತ್ತು.[3] ಶೀಲಾಕಾಂತ ಪತ್ತಾರ ಅವರು ಲಕ್ಷ್ಮಿಯ ಆರಾಧನೆ ಪ್ರಾಚೀನವಾಗಿತ್ತು. ಬಾದಾಮಿ ಚಾಲುಕ್ಯರ ಅವಧಿಯಲ್ಲಿ ಸರಸ್ವತಿಯ ಪೂಜೆ ಕಂಡುಬರುವುದಿಲ್ಲ ಆದರೆ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಸರಸ್ವತಿಯು ವ್ಯಾಪಕವಾಗಿ ಪೂಜೆಗೊಳಪಟ್ಟಳು ಎಂದು ತಿಳಿಸುತ್ತಾರೆ.[4] ಆದರೆ ಈ ವಿಚಾರವನ್ನು ಸದರಿ ಲೇಖನವು ಅಲ್ಲಗಳೆಯುತ್ತದೆ ಕಾರಣ ನಮಗೆ ಕಲ್ಯಾಣ ಚಾಲುಕ್ಯರ ಮೊದಲು ಆಳ್ವಿಕೆ ನಡೆಸಿದ ರಾಷ್ಟ್ರಕೂಟರ ಹಲವಾರು ಶಾಸನಗಳು ಸರಸ್ವತಿ ದೇವಿಯ ಉಲ್ಲೇಖ ಮಾಡುತ್ತವೆ.

ರಾಷ್ಟ್ರಕೂಟರ ಮೂರನೇ ಇಂದ್ರನ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ದಿದ್ದಗಿಯ ಶಾಸನವು ಈ ರೀತಿ ಇದೆ. “ದಿದ್ದಿಗೆಯ ಅಗ್ರಹಾರದ ಕಾಳಭಟ್ಟನೇ ಮುಖ್ಯವಾದ 108 ಜನರಿಗೆ ದಾನ ನೀಡುತ್ತಾನೆ. ಈ ದಾನದಲ್ಲಿ ವಿಷ್ಣುದೇವರಿಗೆ ಒಂದು ಮತ್ತರು, ಸುಬ್ರಮಣ್ಯ ದೇವರಿಗೆ ಹದಿಮೂರು ಮತ್ತರು, ರಾಮೇಶ್ವರ, ಸೋಮೇಶ್ವರ, ಬಿಕೇಶ್ವರ, ಬಳರಿ ಮಾರಿಕಬ್ಬೆಗೆ ಮೂರು ಮತ್ತರು, ಬಳರಿ ಪಿರಿಯಕಬ್ಬೆಗೆ ಮೂರು ಮತ್ತರು, ಸರಸ್ವತಿಗೆ ನಾಲ್ಕು ಮತ್ತರು, ಭಟರೆಗೆ ಹದಿಮೂರು ಮತ್ತರು, ಯಟ್ಟಿಗೆಯ ದೇವರಿಗೆ ಹದಿಮೂರು ಮತ್ತರು” ಭೂದಾನಗಳ ಬಗ್ಗೆ ಉಲ್ಲೇಖ ಮಾಡುತ್ತದೆ. ಈ ಶಾಸನವು ಸ್ಪಷ್ಟವಾಗಿ ಸರಸ್ವತಿ ದೇಗುಲಕ್ಕೆ ಹದಿಮೂರು ಮತ್ತರು ಭೂಮಿದಾನ ಮಾಡಿದ ಉಲ್ಲೇಖ ಮಾಡುತ್ತದೆ.[5]

ಕವಿರಾಜಮಾರ್ಗ ಕೃತಿಯು ಸರಸ್ವತಿಯಿಂದ ಪ್ರಾರಂಭವಾಗುತ್ತದೆ. ಮಾರ್ಗಕಾರನು ತನ್ನ ಎರಡನೇ ವಾಕ್ಯದಲ್ಲಿಯೇ ಸರಸ್ವತಿ ಬಗ್ಗೆ ಈ ರೀತಿ ವರ್ಣಿತವಾಗಿದೆ ಅಚ್ಚ ಬಿಳಿಯ ಮೈಬಣ್ಣದವಳೂ, ಇಂಚರದವಳೂ, ಚತುರ ಸುಂದರ ವಚನಗಳನ್ನೆ ರಚಿಸುವವಳೂ ಆದ ಸರಸ್ವತಿ ದೇವಿಯು ಮಾನಸ ಸರೋವರದಲ್ಲಿ ಹಂಸಿಯು ನೆಲಸುವಂತೆ ನನ್ನ ಮಾನಸ ಚಿತ್ತದಲ್ಲಿ ಅಕ್ಕರೆಯಿಂದ ನೆಲೆಗೊಳ್ಳಲಿ ಎಂದು ಹೇಳಿದ್ದಾನೆ. [6]

ಕರ್ನಾಟಕದಲ್ಲಿ ಸರಸ್ವತಿಯ ಪರಂಪರೆಯನ್ನು ಮತ್ತು ಅದರ ಧಾರ್ಮಿಕ ಮಹತ್ವವನ್ನು ಮೊದಲು ಬೆಳೆಸಿದವರು ಜೈನರು. ರಾಷ್ಟ್ರಕೂಟರ ಕಾಲದಲ್ಲಿ ಸಾಮಾನ್ಯವಾಗಿ ಸರಸ್ವತಿಯನ್ನು ಅಕ್ಷರದ ಮೂಲಕ ಅಂದರೆ ಸಾಹಿತ್ಯದ ಮೂಲಕ ಅದರ ಅಧಿದೇವತೆಯೆಂದು ನಂಬಲಾಗಿದೆ. ಕರ್ನಾಟಕದಲ್ಲಿ ಅದರಲ್ಲಿಯೂ ಸಾಹಿತ್ಯದ ವಿಚಾರದಲ್ಲಿ ರಾಷ್ಟ್ರಕೂಟರು ಕನ್ನಡ ಸಾಹಿತ್ಯವನ್ನು ಅವಿರತವಾಗಿ ಬೆಳೆಸಿದರು. ಅವರ ಕಾಲದಲ್ಲಿಯೇ ಕನ್ನಡ ಸಾಹಿತ್ಯಕ್ಕೆ ಭದ್ರ ಬುನಾದಿ ಹಾಕಿದ್ದು ಪ್ರಮುಖ ಕನ್ನಡ ಕೃತಿಗಳು ಹಾಗೂ ಆದಿಕವಿಗಳು ಇವರ ಕಾಲಮಾನದಲ್ಲಿಯೇ ಸಾಹಿತ್ಯ ರಚನೆಮಾಡಿದರು.

ಸ್ತ್ರೀಯರ ಸಾಮಾಜಿಕ ಜೀವನಕ್ಕೂ ಧಾರ್ಮಿಕತೆಗೆ ಒಂದು ಸಾಮಾಜಿಕ ಸಬಂಧವಿರುತ್ತದೆ. ರಾಷ್ಟ್ರಕೂಟರ ಸಮಕಾಲೀನ ಸಂಧರ್ಭದಲ್ಲಿ ಬಾದಾಮಿ ಚಾಲುಕ್ಯರ ಕಾಲಕ್ಕಿಂತಲೂ ಮಹಿಳೆಯರ ಸ್ಥಿತಿಗತಿಗಳಲ್ಲಿ ಕೆಲವು ಬದಲಾವಣೆಗಳಾದವು. ಅವುಗಳಲ್ಲಿ ಪ್ರಮುಖವಾಗಿ ರಾಷ್ಟ್ರಕೂಟರ ಯಾವುದೇ ಸಮಕಾಲೀನ ಶಾಸನಗಳು ಸತಿಪದ್ದತಿಯ ಕುರುಹುಗಳ ಬಗ್ಗೆ ಉಲ್ಲೇಖಿಸುವುದಿಲ್ಲ. ಜೊತೆಗೆ ಮಹಿಳೆಯೇ ಸ್ವತ ಯುದ್ಧದಲ್ಲಿ ಹೋರಾಡುವುದರ ಜೊತೆಗೆ ವೀರಗಲ್ಲುಗಳ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದನ್ನು ಈ ಕಾಲಮಾನದಲ್ಲಿ ಕಾಣಬಹುದು. ರಾಷ್ಟ್ರಕೂಟರ ಪ್ರಾರಂಭದ ಅವಧಿಯಲ್ಲಿಯೇ ಹಾವೇರಿ ಜಿಲ್ಲೆಯ ಹತ್ತಿಮತ್ತೂರಿನ ಶಾಸನವು ಒಂದನೇ ಕೃಷ್ಣನ ಅವಧಿಯಲ್ಲಿ ದಾಸಮ್ಮ ಮತ್ತು ಎರೆಯ ಎಂಬ ವೀರರು ಊರಳಿವನಲ್ಲಿ ಮರಣ ಹೊಂದಿದರು ಎಂದು ದಾಖಲಿಸುತ್ತದೆ.[7] ಈ ಪ್ರಕ್ರಿಯೆ ಬಾದಾಮಿ ಚಾಲುಕ್ಯರ ಅವಧಿಯಲ್ಲಿ ಬಹಳ ವಿರಳವಾಗಿತ್ತು.

ರಾಷ್ಟ್ರಕೂಟರ ಪ್ರಾರಂಭದ ಅರಸನಾದ ಒಂದನೇ ಧೃವನ ಕಾಲಾವಧಿಯಲ್ಲಿ ಹಾವೇರಿ ಜಿಲ್ಲೆಯ ಹಿರೇಕೇರೂರ ತಾಲೂಕಿನ ಕಛವಿ ಗ್ರಾಮದಲ್ಲಿರುವ ಶಾಸನವು ಮಾರಿಯಬ್ಬೆ ದೇವಿಗೆ ತುಪ್ಪದ ಮೇಲಿನ ತೆರಿಗೆಯಿಂದ ಬಂದ ಆದಾಯವನ್ನು ದಾನವಾಗಿ ಕೊಟ್ಟದ್ದನ್ನು ದಾಖಲಿಸುತ್ತದೆ.[8]

ಭಗವತಿಯು ಶೈವ ದೇವತೆ ಆಗಿದ್ದು ಶಕ್ತಿಯ ರೂಪದಲ್ಲಿ ಆರಾಧನೆ ಮಾಡುತ್ತಿದ್ದರು. ರಾಷ್ಟ್ರಕೂಟರ ಕಾಲದಲ್ಲಿ ಅತಿ ಹೆಚ್ಚು ಭಾರಿ ಶಾಸನೋಕ್ತವಾಗಿ ಉಲ್ಲೇಖವಾಗುವುದರ ಜೊತೆಗೆ ಕೆಲವು ರಾಷ್ಟ್ರಕೂಟರ ಗ್ರಾಮಗಳಿಗೆ ಭಗವತಿ ಎಂಬ ಹೆಸರು ಕಂಡುಬರುತ್ತವೆ. ಇದು ಈ ದೇವಿಯ ಜನಪ್ರಿಯತೆಯ ಬಗ್ಗೆ ತಿಳಿಸುತ್ತದೆ. ಈ ದೇವಿಯ ಮೊದಲ ಉಲ್ಲೇಖ ಗುಜರಾತಿನ ಕಾವಿ ಶಾಸನದಲ್ಲಿ ದೊರೆಯುತ್ತದೆ.[9] ಮೂರನೇ ಕೃಷ್ಣನ ಆಂಧ್ರದ ನಾಯಕಲ್ಲು, ಮಹಾರಾಷ್ಟ್ರದ ಚಿಂಚಳಿ, ಖೊಟ್ಟಿಗನ ಸವಡಿ ಶಾಸನಗಳು ಭಗವತಿಯನ್ನು ಉಲ್ಲೇಖಿಸುತ್ತವೆ.

ಭೋಗಾವತಿ ಎನ್ನುವ ಗ್ರಾಮವು ಇವತ್ತಿನ ರಾಯಚೂರು ಜಿಲ್ಲೆಯ ಮಾನವಿ ತಾಲೂಕಿನಲ್ಲಿದೆ ಆ ಗ್ರಾಮದಲ್ಲಿ ರಾಷ್ಟ್ರಕೂಟರ ಅಕಾಲವರ್ಷನ ಶಾಸನ ದೊರೆತಿದೆ.[10] ಇದೇ ದೇವಿಯ ಹೆಸರಿನ ಗ್ರಾಮವು ಬಾಗಲಕೋಟೆ ತಾಲೂಕಿನಲ್ಲಿಯೂ ಕಂಡುಬರುತ್ತದೆ. ಅಲ್ಲಿಯೂ ಕೂಡ ರಾಷ್ಟ್ರಕೂಟರ ದೇವಾಲಯವಿದೆ.

ಎಲ್ಲಮ್ಮನ ಬಗ್ಗೆ ಕರ್ನಾಟಕದಲ್ಲಿ ಈಗಾಗಲೇ ಸಾಕಷ್ಟು ಅಧ್ಯಯನಗಳು ನಡೆದಿದ್ದು ರಾಷ್ಟ್ರಕೂಟರ ಕಾಲದಲ್ಲಿಯೇ ಈ ದೇವಿಯ ಆರಾಧನೆ ಪ್ರಾರಂಭವಾಗುತ್ತದೆ. ಮೂಲತಃ ಎಲ್ಲಮ್ಮ ಎಲ್ಲೆಯ ಅಥವಾ ಸಿಮೇಯ ದೇವತೆ ಎನ್ನುವ ವಾದ ಹೆಚ್ಚು

ಪ್ರಚಾರಗೊಂಡಿದೆ.[11] ಎಲ್ಲಮ್ಮ ತನ್ನ ಆರಾಧನಾ ಸ್ವರೂಪ ಬದಲಾವಣೆಯೊಂದಿಗೆ ಸಮಾಜದ ನಾನಾ ವರ್ಗಗಳಿಂದ ಆಕರ್ಷಿತವಾಗಿ ಬ್ರಾಹ್ಮಣರಿಗೆ ರೇಣುಕೆಯಾಗಿ, ವೀರಶೈವರಿಗೆ ಸತ್ಯಕ್ಕಳಾಗಿ, ಜೈನರಿಗೆ ಪದ್ಮಾವತಿಯಾಗಿ ಹಾಗೂ ಕೆಳವರ್ಗದವರಿಗೆ ಹುಲಿಗೆಮ್ಮ ಆಗಿ ಪರಿವರ್ತನೆಗೊಂಡಳು ಹೀಗೆ ಸಾಮಾಜಿಕ ಪ್ರಕ್ರಿಯೆಯು ಇವತ್ತಿನವರೆಗೂ ಮುಂದುವರೆದುಕೊಂಡು ಬಂದಿರುವುದು ಸಾಕ್ಷಿಯಾಗಿದೆ.

ಮೂರನೇ ಇಂದ್ರನ ವಜಿರಖೇಡದ ಶಾಸನವು ಉರಿಯಮ್ಮನನ್ನು ಉಲ್ಲೇಖಿಸುತ್ತದೆ. ಈ ಉರಿಯಮ್ಮನಿಗೆ ಆರು ಗ್ರಾಮಗಳನ್ನು ನೀಡಲಾಗಿದೆ.[12] ಹಾಗೇ ಇದೇ ರಾಜನ ಹಾವೇರಿಯ ಕದರಮಮಂಡಲಗಿ ಶಾಸನವು ಸಿಡಿಯ ಮಾರದೇವಿ ಬಗ್ಗೆ ಉಲ್ಲೇಖಿಸುತ್ತದೆ. ಮೂರನೇ ಕೃಷ್ಣನ ಬಳ್ಳಾರಿಯ ಕುಡತಿನಿಯ ಶಾಸನವು ದೇಕಮ್ಮನ ಬಗ್ಗೆ ಉಲ್ಲೇಖಿಸುತ್ತದೆ. ಈ ಶಾಸನವು ದೇಕಮ್ಮನಿಗೆ 62 ಮತ್ತರು ಭೂದಾನ ಮಾಡಿದ ಉಲ್ಲೇಖವಿದೆ.[13]

ಕರ್ನಾಟಕದ ಆರಂಭಿಕ ಮಧ್ಯಕಾಲೀನ ಯುಗದಲ್ಲಿ ಇತಿಹಾಸಕಾರ್ತಿಯಾದ ಮಾಲಿನಿ ಅಡಿಗರವರು ಪ್ರಭುತ್ವವು ಯಾವ ರೀತಿಯಾಗಿ ಮಹಿಳೆ ಜೊತೆ ಸಂಬಂಧ ಹೊಂದಿತ್ತು ಎಂಬುದನ್ನು ವಿವರಿಸಿದ್ದಾರೆ. ಅವರ ಪ್ರಕಾರ ಕ್ರಿ.ಶ. 350 ರಿಂದ 725 ರವರೆಗೆ ಮೊದಲ ಹಂತದಲ್ಲಿ ಮಹಿಳೆಯರ ಹೆಸರು ರಾಜನ ಹೆಂಡತಿ ಹಿರಿಯರಿಸಿ, ರಾಣಿ ರಾಜನ ಸಂಬಂಧಗಳ ಜೊತೆ ವ್ಯಕ್ತವಾಗುತ್ತಿತ್ತು. ಆದರೆ ಎರಡನೇ ಹಂತದಲ್ಲಿ ಅಂದರೆ ಕ್ರಿ.ಶ 725–1030 ರವರೆಗೆ ನೇರವಾಗಿ ಮಹಿಳೆಯರ ಪ್ರತ್ಯೇಕ ಆಳ್ವಿಕೆಯ ಬಗ್ಗೆ ಶಾಸನಗಳು ಮಾಹಿತಿಯನ್ನು ನೀಡುತ್ತವೆ.

ಎರಡನೇ ಹಂತದಲ್ಲಿ ಈ ಬದಲಾವಣೆಗೆ ಕಾರಣಗಳೆಂದರೆ ಹಲವು ಸಾಮಾಜಿಕ ವರ್ಗಗಳು ಪ್ರಭುತ್ವದಲ್ಲಿ ಭಾಗವಹಿಸುವ ಕ್ರಮ ಪ್ರಬಲವಾದಾಗ ಹಾಗೂ ಅಕ್ಷರ ಸಂಸ್ಕೃತಿಯು ಫಸರಿಸಿದಾಗ ಕೆಳವರ್ಗದ ಅಥವಾ ಬುಡಕಟ್ಟಿನ ಸಮಾಜಗಳು ಪ್ರಚಲಿತದಲ್ಲಿದ್ದ ರಾಜಪ್ರಭುತ್ವದ ಸಂಸ್ಕೃತಿಯನ್ನು ಅನುಸರಿಸಿ ರಾಜಕೀಯವಾಗಿ ಸದೃಢವಾಗಲು ಬಯಸಿದರು. ಈ ರೀತಿಯ ಸಾಮಾಜಿಕ ಬದಲಾವಣೆಯಿಂದ ರಾಜಮನೆತನದ ಸ್ತ್ರೀಯರು ಆಳ್ವಿಕೆಯ ಅಧಿಕಾರ ಪರಧಿಯಲ್ಲಿ ಮುನ್ನಲೆಗೆ ಬಂದರು ಜೊತೆಗೆ ರಾಣಿಯರಾಗಿ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿದರು.[14]

ಈ ರೀತಿಯ ಬದಲಾವಣೆಗೆ ರಾಷ್ಟ್ರಕೂಟರ ಪ್ರಾರಂಭಿಕ ಹಂತದಲ್ಲಿಯೇ ಆಕರ ದೊರೆಯುತ್ತದೆ. ಸ್ತ್ರೀ ದೇವತೆಯಾದ ಮಾಣಿಕಬ್ಬೆಗೆ ಮೂರನೇ ಗೋವಿಂದನ ಮಗಳು ಕ್ರಿ.ಶ 798ರಲ್ಲಿ ಚಿಕ್ಕಬಳ್ಳಾಪುರದ ನಂದಿ ಗ್ರಾಮದಲ್ಲಿ ಮಾಣಿಕಬ್ಬೆ ದೇವಾಲಯಕ್ಕೆ ಭೂದಾನ ಮಾಡಿದ್ದಾಳೆ.[15] ಅಮೋಘವರ್ಷನ ಮಗಳು ಚಂದ್ರಲೊಬ್ಬೆ ಎಡತೊರೆ ನಾಡನ್ನು ಆಳುತ್ತಿದ್ದಳು. ಎಡೆತೊರೆ ಅಂದರೆ ಕೃಷ್ಣ ಮತ್ತು ತುಂಗಭದ್ರ ತೊರೆಗಳ ಎಡೆಯಲ್ಲಿರುವ ರಾಯಚೂರಿನ ದೋ–ಅಬ್ ಎನ್ನುವ ಭೂಭಾಗ.[16] ಹೀಗೆ ಈ ಎರಡು ಉದಾಹರಣೆಗಳು ರಾಜಮನೆತನದ ಸ್ತ್ರೀಯರು ಪ್ರಭುತ್ವದಲ್ಲಿ ಭಾಗವಹಿಸುವುದರ ಜೊತೆಗೆ ಕೆಳವರ್ಗದ ಮತ್ತು ತಳಸಮುದಾಯಗಳ ರಾಜಕೀಯ ಭಾಗವಹಿಸುವಿಕೆಯನ್ನು ದೂರಮಾಡಿದರು.

ಮಾಣಿಕಬ್ಬೆ, ಬಳರಿ, ದೇಕಮ್ಮ, ಬಾದುಬ್ಬೆ, ಉರಿಯಮ್ಮ ದೇವತೆಗಳು ಸ್ಪಷ್ಟವಾಗಿ ವೈದಿಕೇತರ ಮತ್ತು ಸ್ಥಳಿಯ ಬುಡಕಟ್ಟಿನ ಸಂಸ್ಕೃತಿ ಹಿನ್ನೆಲೆಯುಳ್ಳದ್ದಾಗಿವೆ. ಬಳರಿದೇವತೆ ಬಗ್ಗೆ ಕಲಬುರ್ಗಿಯವರ ಅಭಿಪ್ರಾಯ ಹೀಗಿದೆ 'ಬಳರಿಯ ಉಲ್ಲೇಖ ಪಂಚತಂತ್ರ, ಮದನತಿಲಕ, ಧರ್ಮಾಮೃತ, ಸಮಯ ಪರೀಕ್ಷೆ, ಲೀಲಾವತಿ ಕೃತಿಗಳಲ್ಲಿ ಬರುತ್ತದೆ. ಬಳರಿಯೆಂದರೆ ಕಾಳಿಯ ಇನ್ನೊಂದು ಹೆಸರು ಬನದ ಬಳರಿ, ಬನದ ಬಳಾರಿ ಎಂದು ಕರೆಯಿಸಿಕೊಳ್ಳುವುದರಿಂದ ಇದು ಬನದಲ್ಲಿ ಅಂದರೆ ಅಡವಿಯಲ್ಲಿ ಸ್ಥಾಪಿಸಿಸಲ್ಪಡುವ ಸ್ತ್ರೀದೇವತೆಯಾಗಿರಬಹುದು. ಬಹುಶಃ ದೇವತೆಯ

ಹೆಸರಿನಲ್ಲಿ ಬಲಿ ಕೊಡುವ, ಮಾಂಸ ತಿನ್ನುವ, ಸೆರೆ ಕುಡಿಯುವ ಕ್ರಿಯೆಗಳಿಗೆ ಗ್ರಾಮಕ್ಕಿಂತ ಅಡವಿಯೆ ಪ್ರಾಶಸ್ತ್ಯ ಸ್ಥಳವೆಂದು ಭಾವಿಸಿ ಭಕ್ತರು ಇದನ್ನು ಬನದಲ್ಲಿ ಸ್ಥಾಪಿಸಿರಬೇಕು. ಈಗಲೂ ಚಿಕ್ಕೆರೂರಿನ ಬಳರಿ ವಿಗ್ರಹವು ಗ್ರಾಮದಿಂದ ದೂರದಲ್ಲಿದೆ.'[17] ಬಳರಿಯ ಪ್ರಸ್ತಾಪವು ಬಾದಾಮಿ ಚಾಲುಕ್ಯರ ಶಾಸನಗಳಲ್ಲಿ ದೊರೆಯುವುದಿಲ್ಲ. ಇದರ ಜೊತೆಗೆ ಅವಳಿಗಾಗಿ ಪ್ರತ್ಯೇಕ ದೇವಾಲಯದ ನಿರ್ಮಾಣ ಕಂಡುಬರುವುದಿಲ್ಲ. ಆದರೆ ರಾಷ್ಟ್ರಕೂಟರ ಕಾಲದಲ್ಲಿ ರಾಯಚೂರಿನ ದಿದ್ದಗಿ ಶಾಸನ, ಗದಗದ ಕವಜಗೇರಿ ಶಾಸನ, ಹಾವೇರಿಯ ನಿಟ್ಟಳ್ಳಿಯ ಶಾಸನಗಳು ಬಳರಿ ಬಗ್ಗೆ ಉಲ್ಲೇಖಿಸುತ್ತವೆ.

ಚಾರಿತ್ರಿಕವಾಗಿ ಜೈನ ಬೌದ್ಧ ಧರ್ಮಗಳು ವ್ಯವಸ್ಥಿತ ರೂಪ ಪಡೆದು ಇಂದಿಗೂ ಅಸ್ತಿತ್ವದಲ್ಲಿರುವಂತೆ ಸ್ತ್ರೀ ದೇವತೆಗಳೂ ಒಂದು ಚಾರಿತ್ರಿಕ ಕಾಲಘಟ್ಟದಲ್ಲಿ ರೂಪುಗೊಂಡಿವೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ ವೈದಿಕ ದೇವತೆಗಳನ್ನು ಮಲಪ್ರಭ ನದಿ ಬಯಲಿನ ಭೌಗೋಳಿಕ ಪರಿಸರದಲ್ಲಿ ನಿರ್ಮಿಸಿ ಕರ್ನಾಟಕದಲ್ಲಿ ವಿಶಿಷ್ಟ ಧಾರ್ಮಿಕ ಪರಂಪರೆಗೆ ಕಾರಣರಾದರು. ಆದರೆ ರಾಷ್ಟ್ರಕೂಟರ ಕಾಲದಲ್ಲಿ ವೈದಿಕ ಮತಪಂಥಗಳ ಆರಾಧನೆಯ ನಬ ಜೊತೆಗೆ ಸ್ಥಳೀಯ ಮತ್ತು ಆಚರಣೆಗೆ ಒಳಪಡದ ಸ್ತ್ರೀ ದೇವತೆಗಳ ಆಚರಣೆಯ ಜೊತೆಗೆ ಅವರಿಗಾಗಿ ಪ್ರತ್ಯೇಕ ದೇವಾಲಯ ನಿರ್ಮಾಣ ಪ್ರಕ್ರಿಯೆ ಧಾರ್ಮಿಕ ವ್ಯವಸ್ಥೆಯಲ್ಲಿ ಕಂಡುಬರುವ ಪ್ರಮುಖ ಅಂಶವಾಗಿದೆ.

ಭಾರತೀಯ ಆರಂಭಿಕ ಮಧ್ಯಕಾಲೀನ ಪ್ರಮುಖ ರಾಜಕೀಯ ಬೆಳವಣಿಗೆಯಲ್ಲಿ ಊಳಿಗಮಾನ್ಯಪದ್ದತಿಯ ಉಗಮ, ಸಾಮಂತ ವ್ಯವಸ್ಥೆ, ಅಧಿಕಾರದ ವಿಕೇಂದ್ರಿಕರಣ ಪ್ರಮುಖ ಲಕ್ಷಣವಾಗಿತ್ತು. ಧಾರ್ಮಿಕ ವ್ಯವಸ್ಥೆಯಲ್ಲಿ ಸ್ಥಳೀಯ ಬುಡಕಟ್ಟು ದೇವತೆಗಳನ್ನು ಪ್ರಭುತ್ವವು ತನ್ನ ಪರಧಿಯೊಳಗೆ ಸೇರಿಸಿಕೊಂಡು ಪ್ರಭುತ್ವದ ಮಾನ್ಯತೆ ಕೊಟ್ಟವು. ಇದರ ಜೊತೆಗೆ ಈ ಕಾಲಮಾನದಲ್ಲಿ ತಾಂತ್ರಿಕ ಪಂಥಗಳು ಎಲ್ಲಾ ಧರ್ಮಗಳಲ್ಲಿ ಬೆಳವಣಿಗೆಯನ್ನು ಕಂಡವು.

ಮೌರ್ಯರು, ಶಾತವಾಹನರು, ಗಂಗರು ಹಾಗೂ ಕದಂಬರ ಆಳ್ವಿಕೆಯಲ್ಲಿ ಸಾಮಂತ ವ್ಯವಸ್ಥೆ ರಾಜಕೀಯವಾಗಿ ಪ್ರಬಲವಾಗಿರಲಿಲ್ಲ. ಆದರೆ ಬಾದಾಮಿ ಚಾಲುಕ್ಯರ ಕಾಲದಲ್ಲಿ ಹೈಹಯ ವಂಶ, ಕದಂಬ, ನಳ, ಕೊಂಕಣದ ಮೌರ್ಯರು, ಅಪ್ಪಾಯಿಕ–ಗೋವಿಂದ, ಕಳಚೂರಿಗಳು, ಬಾಣರು, ಅಳೂಪರು, ಸಾಮಂತರಿದ್ದರು ಆದರೆ ರಾಜಕೀಯವಾಗಿ ಅಷ್ಟೊಂದು ಬಲಿಷ್ಟವಾಗಿರಲಿಲ್ಲ. ಮುಂದುವರೆದು ರಾಷ್ಟ್ರಕೂಟರ ಕಾಲದಲ್ಲಿ ಚೆಲ್ಲಕೇತನರು, ಗಂಗರು, ವೆಂಗಿಯ ಚಾಳುಕ್ಯರು, ಶಿಲಾಹಾರರು, ಮಣಲೇರಿ ಮನೆತನ, ಸವದತ್ತಿಯ ರಟ್ಟರು, ಸಾಂತರರು, ನೊಳಂಬರು, ಬಾಣರು ಮತ್ತು ವೈದುಂಬಯರು ಸೇರಿದಂತೆ ಹತ್ತಕ್ಕೂ ಹೆಚ್ಚು ಸಾಮಂತ ಮನೆತನಗಳು ರಾಷ್ಟ್ರಕೂಟರ ಅಧೀನತೆಯಲ್ಲಿ ಆಳ್ವಿಕೆ ನಡೆಸಿದರು.

ಈ ರಾಜಕೀಯ ಮನೆತನಗಳು ಸ್ಥಳೀಯವಾಗಿ ಪ್ರಬಲವಾಗಿ ಆಡಳಿತ ನಡೆಸುವುದರ ಜೊತೆಗೆ ಅಲ್ಲಿನ ಮೂಲ ಸಂಸ್ಕೃತಿಯನ್ನು ತಮ್ಮ ಆಡಳಿತದ ಪರಿಭಾಷೆಯಲ್ಲಿ ಸಮ್ಮಿಳಿತಗೊಳಿಸಿದರು. ಮತ್ಸ್ಯಪುರಾಣ 108 ಮತ್ತು ಕುರ್ಮ ಪುರಾಣ 1000 ದೇವಿಯರ ಹೆಸರುಗಳನ್ನು ನೀಡುತ್ತದೆ.[18] ಈ ಬದಲಾವಣೆಗಳು ರಾಷ್ಟ್ರಕೂಟರ ಕಾಲಕ್ಕೆ ಸಂಭವಿಸಲು ಹಲವಾರು ಕಾರಣಗಳಿದ್ದವು. ಸಾಮಂತರು ಹೆಚ್ಚಾದಂತೆ ಅವರು ಆಳುವ ಭೌಗೋಳಿಕ ಪ್ರದೇಶದಲ್ಲಿ ಕೃಷಿಯ ವಿಸ್ತರಣೆ ಸಹಜವಾಗುತ್ತದೆ. ಹೊಸ ಹೊಸ ಪ್ರದೇಶಗಳು ಆಡಳಿತ ಪರಿಧಿಯಲ್ಲಿ ಸೇರಿದಾಗ ಅವರ ಸಂಸ್ಕೃತಿಯನ್ನು ಸಹ ಅಳವಡಿಸಿಕೊಳ್ಳುವುದು ಪ್ರಭುತ್ವದ ಬಹುಮುಖ್ಯ ಕಾರ್ಯವಾಗಿರುತ್ತದೆ. ರಾಷ್ಟ್ರಕೂಟರ ರಾಜಚಿಹ್ನೆಗಳಲ್ಲಿ ನೇಗಿಲು ಕೂಡ ಒಂದಾಗಿತ್ತು ಎಂಬುದನ್ನು ಅವರ ಹಲವಾರು ವೀರಗಲ್ಲುಗಳು ಮತ್ತು ಶಾಸನಗಳು ಸ್ಪಷ್ಟಪಡಿಸುತ್ತವೆ. ಮೇಲಿನ ಸ್ತ್ರೀ ದೇವತೆಗಳ ದೇವಾಲಯಗಳು ಪ್ರಜೆಗಳಲ್ಲಿ ಭಯ, ಭಕ್ತಿ

ಮೂಡುವಂತೆ ಮಾಡಿ ಆ ಮೂಲಕ ಪ್ರಭುತ್ವವನ್ನು ಒಪ್ಪಿಕೊಳ್ಳುವಂತಹ ಕೆಲಸವನ್ನು ಮಾಡುತ್ತಿದ್ದವು.

ರಾಷ್ಟ್ರಕೂಟರ ಸ್ತ್ರೀ ದೇವತೆಗಳ ಮೇಲಿನ ಪಟ್ಟಿಯು ಸ್ಪಷ್ಟವಾಗಿ ಸ್ಥಳೀಯ ದೇವತೆಗಳನ್ನು ಲೋಕದೇವತೆಗಳನ್ನು ಮಾಡುವ ಪ್ರಕ್ರಿಯೆಯಾಗಿದೆ. ಪ್ರಭುತ್ವವು ತನ್ನ ಅಧಿಕಾರದ ವಿಸ್ತಾರದ ಜೊತೆಗೆ ಸಮಕಾಲೀನ ಸಮಾಜದಲ್ಲಿ ಅದರಲ್ಲಿಯೂ ಅವರ ಧಾರ್ಮಿಕ ನಂಬಿಕೆಗಳ ವ್ಯಾಪಕ ಒಪ್ಪಿಗೆಯಾಗಿರುತ್ತದೆ. ಸ್ಥಳೀಯ ದೇವತೆಗಳಗಳು ಶಾಸನಗಳಲ್ಲಿ ಸ್ಥಾನಮಾನ ಪಡೆಯುವುದು ಸಾಮನ್ಯ ಸಂಗತಿ ಅಲ್ಲ ಜೊತೆಗೆ ಅವರಿಗಾಗಿ ಪ್ರತ್ಯೇಕ ದೇವಾಲಯಗಳ ನಿರ್ಮಾಣ ಕ್ರಿಯೆಯು ಸ್ಪಷ್ಟವಾಗಿ ಅದರ ಮಹತ್ವ ಸೂಚಿಸುತ್ತದೆ.

ಇಲ್ಲಿಯವರೆಗೆ ವೈದಿಕ, ಶಾಕ್ತ, ವೈಷ್ಣವ, ಶೈವ ದೇವತೆಗಳೆಂದು ಸರಳೀಕರಿಸಿ ಅಧ್ಯಯನಗಳು ಸಾಕಷ್ಟಾಗಿವೆ ಆದರೆ ಮೇಲಿನ ಸ್ಥಳೀಯ ದೇವತೆಗಳ ಬಗ್ಗೆ ಬಹಳ ವಿರಳ ಅಧ್ಯಯನಗಳಾಗಿವೆ. ಅದರಲ್ಲಿಯೂ ಎಲ್ಲಮ್ಮ, ಮಹಾಲಕ್ಷ್ಮಿಯ ಬಗ್ಗೆ ಸಾಕಷ್ಟು ಅಧ್ಯಯನಗಳಾಗಿವೆ. ರಾಷ್ಟ್ರಕೂಟರ ಕಾಲದಲ್ಲಿ ಶೈವ, ವೈಷ್ಣವ ಮತ್ತು ಜೈನ ಧರ್ಮಗಳು ಕೂಡ ತಮ್ಮ ದಾರ್ಮಿಕ ವ್ಯವಸ್ಥೆಯಲ್ಲಿ ಹಲವಾರು ಸ್ತ್ರೀ ದೇವತೆಗಳನ್ನು ಆರಾಧಿಸುವುದರ ಜೊತೆಗೆ ಸ್ಥಳಿಯ ದೇವತೆಗಳನ್ನು ಲೋಕ ದೇವತೆಗಳನ್ನಾಗಿ ಮಾಡಿತು.

ಇತ್ತೀಚೀನ ದಿನಮಾನದಲ್ಲಿ ಕೆಳಸ್ತರದ ಚರಿತ್ರೆ ಬರವಣಿಗೆಯು ಮಾನ್ಯ ಪಡೆಯುತ್ತಿದ್ದು ಸಂಸ್ಕೃತಿ, ಪರಂಪರೆ ನಿರ್ಮಾಣ ಮಾಡುವಲ್ಲಿ ಕೆಳಸ್ತರದ ಪಾತ್ರವನ್ನು ಅಧ್ಯಯನ ಮಾಡುವ ಅವಶ್ಯಕತೆ ಇದೆ. ಒಂದು ಬುಡಕಟ್ಟು ಅಥವಾ ಸ್ಥಳಿಯ ದೇವತೆಗಳು ಭೂದಾನ ಪಡೆದ ವಿಷಯ ಸಾಮಾನ್ಯವಾಗಿರುವುದಿಲ್ಲ. ಹಾಗಾಗಿ ರಾಷ್ಟ್ರಕೂಟರ ಸಮಕಾಲೀನವಾಗಿ ಪ್ರಚಲಿತದಲ್ಲಿದ್ದ ಈ ಸ್ತ್ರೀದೇವತೆಗಳ ಬಗ್ಗೆ ಗಂಭೀರ ಅಧ್ಯಯನಗಳು ನಡೆದರೆ ಸಂಪೂರ್ಣ ಕೆಳಸ್ತರದ ಚರಿತ್ರೆ ಕಟ್ಟಿಕೊಳ್ಳಬಹುದು.

**ಕೊನೆಟಿಪ್ಪಣಿಗಳು**

---

[1] ಮೋಹನ ಕೃಷ್ಣ ರೈ. (2017). *ಪ್ರಭುತ್ವ ಮತ್ತು ಜನತೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಪುಟ. 151.

2 ಕುಲಕರ್ಣಿ, ಆರ್.ಎಚ್. (2019). *ಕರ್ನಾಟಕದ ಆರಂಭಿಕ ಶಿಲ್ಪಕಲೆ.* ಕರ್ನಾಟಕ ಶಿಲ್ಪಕಲಾ ಅಕಾಡೆಮಿ. ಪುಟ. 66.

3 ಮಾಲಿನಿ ಅಡಿಗ. (2006). *ದ ಮೇಕಿಂಗ್ ಆಫ್ ಸದರನ್ ಕರ್ನಾಟಕ ಬಿಸಿ 400–1030.* ಓರಿಯಂಟ್ ಬ್ಲಾಕ್ ಸ್ವಾಂಗ್ ಪ್ರೈವೆಟ್ ಲಿಮಿಟೆಡ್. ಪುಟ.324.

4 ಶೀಲಾಕಾಂತ ಪತ್ತಾರ. (2018). *ಬಾದಾಮಿ ಸಾಂಸ್ಕೃತಿಕ ಅಧ್ಯಯನ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಪುಟ.194.

5 *ರಾಷ್ಟ್ರಕೂಟರ ಶಾಸನ ಸಂಪುಟ–1* ಪುಟ. 408.

6 ಕೃಷ್ಣಮೂರ್ತಿ, ಕೆ. (2021). *ಕವಿರಾಜಮಾರ್ಗಂ.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. ಪುಟ. 53

7 ರಾಷ್ಟ್ರಕೂಟರ ಶಾಸನ ಸಂಪುಟ–1, ಪುಟ. 19.

8 ಅದೇ. ಪುಟ. 66.

9 ಅದೇ. ಪುಟ. 71.

10 ಅದೇ. ಪುಟ. 329.

11 ಮೋಹನಕೃಷ್ಣ ರೈ. (2017). ಪೂರ್ವೋಕ್ತ. ಪುಟ. 154.

12 ರಾಷ್ಟ್ರಕೂಟ ಶಾಸನ ಸಂಪುಟ–1. ಪುಟ. 212.

13 ರಾಷ್ಟ್ರಕೂಟ ಶಾಸನ ಸಂಪುಟ–2. ಪುಟ. 537.

14 ಮಾಲಿನಿ ಅಡಿಗ. (2006). ಪೂರ್ವೋಕ್ತ. ಪುಟ.203.

15 ರಾಷ್ಟ್ರಕೂಟ ಶಾಸನ ಸಂಪುಟ–1. ಪುಟ.95

16 ಬಸವರಾಜ ಕೋಡಗಂಟಿ. (2021). *ರಾಜಮನೆತನ.* ಭಂಡಾರ ಪ್ರಕಾಶನ. ಪುಟ.53.

17 ಕಲಬುರ್ಗಿ, ಎಂ.ಎಂ. (2006). *ಸಂಸ್ಕೃತಿ–ವಿಕೃತಿ. ಬಳರಿದೇವತೆ.* ಮಹಾಪ್ರಬಂಧ. ಪುಟ.43

18 ರಣಬೀರ ಚಕ್ರವರ್ತಿ. (2017). *ಅರ್ಲಿ ಇಂಡಿಯಾ.* ಪ್ರಿಮುಸ್ ಬುಕ್ಸ್. ಪುಟ. 401.